# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 182 | Pages. 2 | Date: 28-05-2025, WEDNESDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 182 - ಪುಟಗಳು : 2 - 28 ಮೇ 2025 ಬುಧವಾರ Ph: 8762954248 ದರ : ₹1


# ಗಾಢ ನಿದ್ರೆಯಲ್ಲಿ ರಾಜ್ಯ ಸರ್ಕಾರ: ಅಶೋಕ್

## ಸಚಿವರಿಗೆ ಜನರ ಕಷ್ಟಕ್ಕಿಂತ ಐಪಿಎಲ್ ಮುಖ್ಯ | ಇನ್ನಾದರೂ ಎಚ್ಚೆತ್ತುಕೊಳ್ಳಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**



ಸಕಲೇಶಪುರ: ರಾಜ್ಯ ಸರ್ಕಾರ ಗಾಢ ನಿದ್ರೆಯಲ್ಲಿದ್ದು ಮಳೆ ಮುಂಜಾಗ್ರತೆ ವಹಿಸುವುದನ್ನು ಮರೆತಿದೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಕಿಡಿಕಾರಿದರು.

ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಭೂಕುಸಿತ ಸಂಭವಿಸಿರುವ ಪ್ರದೇಶಗಳಿಗೆ ಮಂಗಳವಾರ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದರು. ರಾಷ್ಟ್ರೀಯ ಹೆದ್ದಾರಿ 75ರ ಹತ್ತು ಕಿ.ಮೀ. ವ್ಯಾಪ್ತಿಯ ಹಲವೆಡೆ ಭೂಕುಸಿತ ಸಂಭವಿಸಿದೆ. ತಡೆಗೋಡೆ ಕಾಮಗಾರಿ ಬಹುತೇಕ ಕಳಪೆಯಾಗಿರುವುದು ಮೇಲ್ನೋಟಕ್ಕೆ ಗೋಚರಿಸುತ್ತಿದೆ. ಹೆದ್ದಾರಿಯಲ್ಲಿ ನಿತ್ಯ ಭೂಕುಸಿತ ಸಂಭವಿಸುತ್ತಿರುವುದರಿಂದ ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಸಂಚರಿಸಬೇಕಿದೆ. ಕಾಮಗಾರಿ ಬಗ್ಗೆ ನಿಗಾ ವಹಿಸ ಬೇಕಿರುವ ಸಚಿವರು ಕಾಣೆಯಾಗಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದಲೇ ಹಾನಿ ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದೇನೆ ಎಂದರು.

ಈ ಹಿಂದಿನ ಸರ್ಕಾರಗಳು ಮಳೆಗಾಲಕ್ಕೂ ಮುನ್ನ ಸಂಭಾವ್ಯ ಅವಘಡಗಳನ್ನು ತಡೆಯುವ ನಿಟ್ಟಿನಲ್ಲಿ ಪೂರ್ವಭಾವಿ ಸಭೆ ನಡೆಸಿ ಪರಿಹಾರದ ಮೊತ್ತವನ್ನು ಘೋಷಿಸುವ ಮೂಲಕ ಜಿಲ್ಲಾಡಳಿತ ಸಕ್ರಿಯವಾಗಿ ಕೆಲಸ ಮಾಡುವಂತೆ ಆದೇಶ ನೀಡುತ್ತಿದ್ದವು. ಆದರೆ ಸಿದ್ದರಾಮಯ್ಯ ಅವರ ಸರ್ಕಾರ ಈ ನಿಟ್ಟಿನಲ್ಲಿ ಯಾವುದೇ ಸಭೆ ನಡೆಸದೆ ಕೇವಲ ಎರಡು ವರ್ಷದ ಸಾಧನಾ ಸಮಾವೇಶ ನಡೆಸುವುದರಲ್ಲೇ ಮೈರೆತಿದೆ. ಸಚಿವರು ಐಪಿಎಲ್ ಕ್ರಿಕೆಟ್ ವೀಕ್ಷಿಸುತ್ತ ಕಾಲ ಹರಣ ಮಾಡುತ್ತಿದ್ದಾರೆ ಎಂದರು.

ರಾಜ್ಯದ ಹಲವೆಡೆ ಭೂಕುಸಿತ ಸಂಭವಿಸಿ ಬಾರಿ ಅನಾಹುತಗಳೇ ನಡೆಯುತ್ತಿದ್ದರೂ ಯಾವುದೇ ಸಚಿವರಾಗಲಿ, ಜಿಲ್ಲಾ ಉಸ್ತುವಾರಿ ಸಚಿವರಾಗಲಿ ಹಾನಿ ಪ್ರದೇಶಗಳಿಗೆ ಭೇಟಿ ನೀಡಿಲ್ಲ. ಇದು ಜನಸಾಮಾನ್ಯರ ಮೇಲೆ ಸರ್ಕಾರಕ್ಕಿರುವ ಕಾಳಜಿಯನ್ನು ಎತ್ತಿತೊರುತ್ತಿದೆ. ಒಂದೆಡೆ ಮಳೆಯಿಂದ ಅನಾಹುತಗಳು ನಡೆಯುತ್ತಿದ್ದರೆ ಮತ್ತೊಂದೆಡೆ ಕೋವಿಡ್ ಬಿರುಗಾಳಿ ಯಂತೆ ರಾಜ್ಯದಲ್ಲಿ ಹಬ್ಬುತ್ತಿದೆ. ಈ ಬಗ್ಗೆಯು ಸರ್ಕಾರ ನಿರ್ಲಕ್ಷ್ಯ ವಹಿಸಿದೆ. ಈ ಬಗ್ಗೆ ಆರೋಗ್ಯ ಸಚಿವರಾಗಲಿ, ಮುಖ್ಯಮಂತ್ರಿಗಳಾಗಲಿ ತುಟಿಬಿಚ್ಚುತ್ತಿಲ್ಲ. ಕೋವಿಡ್‌ನಿಂದ ಜನಸಾಮಾನ್ಯರನ್ನು ರಕ್ಷಿಸಲು ಅಗತ್ಯ ಮುಂಜಾಗ್ರತ ಕ್ರಮ ಕೈಗೊಳ್ಳಬೇಕು ಹಾಗೂ ರಾಜ್ಯದಲ್ಲಿ ಲಭ್ಯವಿರುವ ಕೋವಿಡ್ ಲಸಿಕೆ ಸಂಖ್ಯೆಯನ್ನು ಬಹಿರಂಗಗೊಳಿಸಬೇಕು ಎಂದು ಒತ್ತಾಯಿಸಿದರು.

### ಪ್ರಧಾನಿ ಭೇಟಿ ಮಾಡಲಿ

ನೀತಿ ಆಯೋಗದ ಸಭೆಗೆ ಹೋಗದ ಮುಖ್ಯಮಂತ್ರಿಗಳು ಅನಾವಶ್ಯಕವಾಗಿ ಅನುದಾನ ನೀಡುತ್ತಿಲ್ಲ ಎಂದು ಕೇಂದ್ರ ಸರ್ಕಾರವನ್ನು ದೂರುತ್ತಿದ್ದಾರೆ. ಪಕ್ಕದ ತಮಿಳುನಾಡು ಸರ್ಕಾರದ ಪ್ರತಿನಿಧಿಗಳು ನೀತಿ ಆಯೋಗದ ಸಭೆಯಲ್ಲಿ ಭಾಗವಹಿಸುವ ಮೂಲಕ ರಾಜ್ಯಕ್ಕೆ ಅಗತ್ಯವಿರುವ ಅನುದಾನ ಬಿಡುಗಡೆ ಮಾಡಿಸಿಕೊಳ್ಳಲು ಯಶಸ್ವಿಯಾಗಿದ್ದಾರೆ. ರಾಜಸ್ತಾನದಲ್ಲಿ ನಡೆಯುವ ಕಾಂಗ್ರೆಸ್ ಸಮಾವೇಶಕ್ಕೆ ಹೋಗಲು ಸರ್ಕಾರದ ಪ್ರತಿನಿಧಿಗಳಿಗೆ ಸಮಯವಿದೆ. ನೀತಿ ಆಯೋಗದ ಸಭೆಗೆ ಹೋಗಲು ಸಮಯವಿಲ್ಲವೇ. ಇದರಿಂದ ಸಿದ್ದರಾಮಯ್ಯನವರಿಗೆ ಯಾವುದೆ ನಷ್ಟವಿಲ್ಲ. ಅದರ ದುಷ್ಪರಿಣಾಮ ಬೀರುವುದು ರಾಜ್ಯದ ಜನರಿಗೆ. ಇಂತಹ ದುರಂಕಾರದ ಸರ್ಕಾರವನ್ನು ಕಿತ್ತುಹಾಕುವ ಸಮಯ ಶೀಘ್ರವೇ ಬರಲಿದೆ ಎಂದರು.

ರಾಜ್ಯ ಸರ್ಕಾರ ಸೇಡಿನ ರಾಜಕೀಯ ಮಾಡುವುದರಲ್ಲೆ ಕಾಲಕಳೆಯುತ್ತಿದೆ. ವಿರೋಧ ಪಕ್ಷದ ನಾಯಕರ ಕೆಲಸವೇ ಸರ್ಕಾರವನ್ನು ಟೀಕೆ ಮಾಡುವುದು. ಆದರೆ, ಸರ್ಕಾರ ಟೀಕಕಾರರ ಮೇಲೆ ದೂರು ದಾಖಲಿಸುವ ಮೂಲಕ ಅವರ ಮನೋಬಲವನ್ನು ಕುಗ್ಗಿಸುವ ಕೆಲಸ ಮಾಡುತ್ತಿದೆ. ಇಂತದಕ್ಕೆಲ್ಲ ಜಗ್ಗುವವರು ನಾವಲ್ಲ. ತುರ್ತು ಪರಿಸ್ಥಿತಿಯಲ್ಲಿ ಜೈಲಿಗೆ ಹೋಗಿ ಇಂದಿರಾ ಗಾಂಧಿಯನ್ನು ಎದುರು ಹಾಕಿಕೊಂಡವರು ನಾವು. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಯಾವ ಲೆಕ್ಕ ಎಂದರು.



ಶಾಸಕ ಸಿಮೆಂಟ್ ಮಂಜು, ಮಾಜಿ ಶಾಸಕರಾದ ಹೆಚ್.ಕೆ. ಕುಮಾರಸ್ವಾಮಿ, ಎಚ್.ಎಂ. ವಿಶ್ವನಾಥ್, ಜಿಲ್ಲಾಧಿಕಾರಿ ಸಿ. ಸತ್ಯಭಾಮ, ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿ ಮೊಹಮದ್ ಸುಜಿತಾ, ಸಹಾಯಕ ಪೋಲಿಸ್ ವರೀಷ್ಠಾಧಿಕಾರಿ ತಮ್ಮಯ್ಯ, ಉಪವಿಭಾಗಾಧಿಕಾರಿ ಡಾ. ಎಂ.ಕೆ. ಶೃತಿ. ಡಿವೈಎಸ್‌ಪಿ ಪ್ರಮೋದ್, ತಹಸೀಲ್ದಾರ್ ಅರವೀಂದ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಹಾಗೂ ಇತರರಿದ್ದರು.

## ಮಲೆನಾಡಿನಲ್ಲಿ ತಗ್ಗಿದ ಮಳೆ ಅಬ್ಬರ



ಸಕಲೇಶಪುರ: ತಾಲ್ಲೂಕಿನಾದ್ಯಂತ ಮಂಗಳವಾರವು ಮಳೆ ಸುರಿಯಿತಾದರೂ ಅಬ್ಬರ ಕಡಿಮೆಯಾಗಿ ಜನರು ನಿಟ್ಟುಸಿರು ಬಿಟ್ಟರು.

ಕಳೆದ 7 ದಿನಗಳಿಂದ ತಾಲ್ಲೂಕಿನಲ್ಲಿ ಮಳೆ ನಿರಂತರವಾಗಿ ಸುರಿಯುತ್ತಿದ್ದು ಸೋಮವಾರ ಬೆಳಿಗ್ಗೆ 08:30ಕ್ಕೆ ಆರಂಭವಾಗಿ ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ 24 ಗಂಟೆಗಳಲ್ಲಿ ತಾಲ್ಲೂಕಿನ ಹೆತ್ತೂರು (129.3 ಮಿ.ಮೀ.), ಹಾನುಬಾಳ್ (72.0 ಮಿ.ಮೀ.), ಮತ್ತು ಯಸಳೂರು (72.7 ಮಿ.ಮೀ.), ಬೆಳಗೋಡು (30 ಮಿ.ಮೀ) ಹಾಗೂ ಕಸಬಾ (50.4 ಮಿ.ಮೀ) ಮಳೆಯಾಗಿದ್ದು ಬಹುತೇಕವಾಗಿ ಎಲ್ಲೆಡೆ ವಾಡಿಕೆಗಿಂತ ಹೆಚ್ಚಿನ ಮಳೆಯಾಗಿದೆ.

ತಾಲ್ಲೂಕಿನಲ್ಲಿ ಕಳೆದ 7 ದಿನಗಳಿಂದ ಸುರಿಯುತ್ತಿರುವ ಮಳೆ ಮುಂದುವರೆದಿದ್ದು ಸಂಪೂರ್ಣವಾಗಿ ಮಳೆಗಾಲದ ವಾತಾವರಣ ನಿರ್ಮಾಣವಾಗಿದೆ. ಮಂಗಳವಾರ ಮಳೆಯ ಆರ್ಭಟ ಕಡಿಮೆಯಾಗಿದ್ದರಿಂದ ಜನಸಾಮಾನ್ಯರಲ್ಲಿ ತುಸು ನೆಮ್ಮದಿ ಉಂಟಾಯಿತು. ಸುರಿಯುತ್ತಿರುವ ಮಳೆಯಿಂದಾಗಿ ಜನಸಾಮಾನ್ಯರ ಕೆಲಸ ಕಾರ್ಯಗಳಿಗೆ ಅಡಚಣೆಯುಂಟಾಗಿದೆ. ಹಾನುಬಾಳ್‌ನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ತಡೆಗೋಡೆ ಕುಸಿದಿದ್ದು ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ. ಕೆಸಗನಹಳ್ಳಿ ಗ್ರಾಮದ ಕಮಲಮ್ಮ ಎಂಬುವರ ಮನೆ ಛಾವಣಿ ಸಂಪೂರ್ಣವಾಗಿ ಕುಸಿದಿದೆ. ಕೆಲಗಲೆ ಗ್ರಾಮದ ಕವಿತಾ ಎಂಬುವರ ಮನೆ ಮೇಲೆ ಮರ ಬಿದ್ದಿದ್ದು ಅದೃಷ್ಟವಶಾತ್ ಯಾರಿಗೂ ಹಾನಿಯಾಗಿಲ್ಲ. ಅರಣ್ಯ ಇಲಾಖೆಯವರು ವಲಯ ಅರಣ್ಯಾಧಿಕಾರಿ ಹೇಮಂತ್ ಕುಮಾರ್ ಮಾರ್ಗದರ್ಶನದಲ್ಲಿ ಮರವನ್ನು ತೆರವುಗೊಳಿಸಿದ್ದಾರೆ. ಹೆನ್ನಲಿ ಗ್ರಾಮದ ಸುರೇಶ್ ಎಂಬುವರ ಮನೆಯ ತಡೆಗೋಡೆ ಸಂಪೂರ್ಣವಾಗಿ ಕುಸಿದಿದೆ. ಮಳೆಯ ಆರ್ಭಟ ಕಡಿಮೆಯಾದರೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ಯಥಾಸ್ಥಿತಿಗೆ ಬರದ ಕಾರಣ ಹಲವು ಗ್ರಾಮಗಳು ಕತ್ತಲಿನಲ್ಲೇ ಉಳಿಯುವಂತಾಗಿದೆ. ಸೆಸ್ಕ್ ಸಿಬ್ಬಂದಿಗಳು ವಿದ್ಯುತ್ ನೀಡಲು ಹಗಲು ರಾತ್ರಿ ಶ್ರಮಿಸುತ್ತಿದ್ದಾರೆ. ಶಿರಾಡಿ ಘಾಟ್‌ನಲ್ಲಿ ಅಲ್ಲಲ್ಲಿ ಲಘು ಭೂಕುಸಿತ ಮುಂದುವರೆದಿದ್ದು ಇದರಿಂದ ಆಗಾಗ ಟ್ರಾಫಿಕ್ ಕಿರಿಕಿರಿ ಉಂಟಾಗುತ್ತಿತ್ತು.

## ಆನೆ ದಾಳಿ: ಕೂದಲೆಳೆ ಅಂತರದಲ್ಲಿ ರೈತ ಪಾರು

ಬೇಲೂರು: ಧಾರಾಕಾರ ಮಳೆಯ ನಡುವೆಯೂ ತಾಲ್ಲೂಕಿನ ವಿವಿಧೆಡೆ ಕಾಡಾನೆಗಳ ಉಪಟಳ ಮುಂದುವರಿದಿದೆ.

ಮಂಗಳವಾರ ಕಾರ್ಮಿಕನ ಮೇಲೆ ಒಂಟಿಸಲಗ ದಾಳಿ ಮಾಡಲು ಯತ್ನಿಸಿದೆ. ಅದೃಷ್ಟವಶಾತ್ ಓಡುವ ಬದಲು ಮರವೇರಿದ ರೈತ, ಜೀವ ಉಳಿಸಿಕೊಂಡಿದ್ದಾನೆ. ತಾಲ್ಲೂಕಿನ ಕೋಗೋಡು ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ದೈತ್ಯಾಕಾರದ ಕಾಡಾನೆಯಿಂದ ಕೂದಲೆಳೆ ಅಂತರದಲ್ಲಿ ರೈತ ಪಾರಾಗಿದ್ದಾನೆ. ಸದ್ಯ ಕಾಡಾನೆ ತೋಟದಲ್ಲೇ ಅಲೆದಾಡುತ್ತಿದೆ. ಸುದ್ದಿ ತಿಳಿದ ಕೂಡಲೇ ಸ್ಥಳಕ್ಕೆ ದೌಡಾಯಿಸಿರುವ



ಅರಣ್ಯ ಇಲಾಖೆ ಇಟಿಎಫ್ ಸಿಬ್ಬಂದಿ, ಕಾಡಾನೆ ಚಲನ ವಲನದ ಬಗ್ಗೆ ಸ್ಥಳೀಯರಿಗೆ ಮಾಹಿತಿ ನೀಡುತ್ತಿದ್ದಾರೆ.

ಮತ್ತೊಂದೆಡೆ ಕಾಡಾನೆ ದಾಳಿ ನಡೆಸಿ ಅಪಾರ ಪ್ರಮಾಣದ ಬೆಳೆನಾಶ ಮಾಡಿವೆ. ಕಾಫಿ, ಅಡಕೆ ಗಿಡಗಳನ್ನು ಕಿತ್ತು ಬಿಸಾಡಿರುವ ಕಾಡಾನೆ ಹಿಂಡು, ಕೆಲವು ಮರಗಳನ್ನು ಬುಡಮೇಲು ಮಾಡಿವೆ. ಮಳೆ ಸುರಿಯುತ್ತಿದ್ದರೂ, ಕಾಡಾನೆ ಬೆಳೆ ನಾಶದಲ್ಲಿ ತೊಡಗುವುದರ ಜೊತೆಗೆ ಜೀವ ಹಾನಿಗೂ ಪ್ರಯತ್ನ ಮಾಡುತ್ತಿರುವುದು ಸಹಜವಾಗಿಯೇ ಆತಂಕ ತರಿಸಿದೆ.

## ಪಟ್ಟಣ ಪಂಚಾಯಿತಿ ವಿರುದ್ಧ ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಅರಕಲಗೂಡು: ಪಟ್ಟಣದ ಸಂತೆಮರೂರು ವೃತ್ತ ರಸ್ತೆ ಪಕ್ಕದ ಜಾಗದಲ್ಲಿ ಹಾಲಿನ ಬೂತ್ ಇಡಲು ಪಟ್ಟಣ ಪಂಚಾಯಿತಿ ಕಾನೂನು ಬಾಹಿರವಾಗಿ ಅನುಮತಿ ನೀಡಿದೆ ಎಂದು ಆರೋಪಿಸಿ ಸ್ಥಳೀಯರು ಮಂಗಳವಾರ ಪ್ರತಿಭಟಿಸಿದರು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ್ ಸೌಮ್ಯ, ಸಿಪಿಐ ವಸಂತ್, ಗ್ಯಾರಂಟಿ ಸಮಿತಿ ಅಧ್ಯಕ್ಷ ಶ್ರೀಧರ್‌ಗೌಡ, ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಸುಭಾನ್ ಷರೀಫ್, ಮುಖ್ಯಾಧಿಕಾರಿ ಬಸವರಾಜ ಟಾಕಪ್ಪ ಶಿಗ್ಗಾಂವಿ ಅವರು ಪ್ರತಿಭಟನಾನಿರತರೊಂದಿಗೆ ಸಮಾಲೋಚನೆ ನಡೆಸಿ ಪರಿಸ್ಥಿತಿ ತಿಳಿಗೊಳಿಸಿದರು.

ತಹಸೀಲ್ದಾರ್ ಸೌಮ್ಯ ಮಾತನಾಡಿ, ಸಾರ್ವಜನಿಕರಿಗೆ ಅನುಕೂಲವಾಗುವ ಮತ್ತು ಆಕ್ಷೇಪಣೆ ಇಲ್ಲದ ಜಾಗವನ್ನು ಗುರುತಿಸಿ ಹಾಲಿನ ಬೂತ್ ಸ್ಥಾಪಿಸಲು ಅವಕಾಶ ಮಾಡಿಕೊಡಿ. ಈಗ ಗುರುತಿಸಿರುವ ಜಾಗ ಸೂಕ್ತವಾಗಿಲ್ಲ. ಇದು ನಿಯಮಗಳಿಗೆ ವಿರುದ್ಧವಾಗಿದೆ. ಮುಂದಿನ ಕ್ರಮವನ್ನು ಸೂಕ್ತ ರೀತಿಯಲ್ಲಿ ಕೈಗೊಳ್ಳಿ ಎಂದು ಮುಖ್ಯಾಧಿಕಾರಿಗೆ ಸೂಚನೆ ನೀಡಿದರು.

ಈ ಜಾಗದಲ್ಲಿ ಹಾಲಿನ ಬೂತ್ ಸ್ಥಾಪಿಸಲು ಪಪಂ ಸಭೆಯಲ್ಲಿ ನಿರ್ಣಯ ಮಾಡಲಾಗಿದೆ. ಸಾರ್ವಜನಿಕರ ವಿರೋಧ ಹಿನ್ನಲೆಯಲ್ಲಿ ಹಾಲಿನ ಬೂತ್ ಮಾಡಲು ಅವಕಾಶ ನೀಡುವುದಿಲ್ಲ ಎಂದು ಮುಖ್ಯಾಧಿಕಾರಿ ಬಸವರಾಜ ಟಾಕಪ್ಪ ಶಿಗ್ಗಾಂವಿ ಭರವಸೆ ನೀಡಿದರು.

ಗ್ಯಾರಂಟಿ ಸಮಿತಿ ಅಧ್ಯಕ್ಷ ಶ್ರೀಧರ್ ಗೌಡ ಮಾತನಾಡಿ, ಸಾರ್ವಜನಿಕರಿಗೆ ಅಗತ್ಯವಿರುವ ಹಾಲಿನ ಬೂತ್‌ನ್ನು ಕಾನೂನು ಪರಿಮಿತಿಯೊಂದಿಗೆ ಸೂಕ್ತ ಸ್ಥಳದಲ್ಲಿ ಇಡಲು ಯಾರಿಂದಲೂ ವಿರೋಧ ಉಂಟಾಗುವುದಿಲ್ಲ. ಆದರೆ ಸಂತೆಮರೂರು ಸರ್ಕಲ್ ಹೆಚ್ಚು ವ್ಯಾಪಿಸುತ್ತಿದೆ. ಜನದಟ್ಟಣೆ ಕೂಡ ಇದೆ. ವಾಣಿಜ್ಯ ವಹಿವಾಟು ಕೂಡ ಜೋರಾಗಿದೆ. ಖಾಸಗಿ ಮೆಡಿಕಲ್ ಜಾಗಕ್ಕೆ ಹೊಂದಿಕೊಂಡಂತೆ ಹಾಲಿನ ಬೂತ್ ಸ್ಥಾಪಿಸಲು ನೀಡಿರುವ ಅನುಮತಿ ಸಂಪೂರ್ಣವಾಗಿ ಕಾನೂನು ಉಲ್ಲಂಘನೆಯಾಗಿದೆ ಎಂದರು.

ಪಟ್ಟಣ ಪಂಚಾಯಿತಿ ಸದಸ್ಯ ನಿಖಿಲ್ ಕುಮಾರ್, ಮಾಜಿ ಅಧ್ಯಕ್ಷ ಲೋಕೇಶ್, ಮಾಜಿ ಉಪಾಧ್ಯಕ್ಷರಾದ ಸಲೀಂ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೋಮಶೇಖರ್, ತಾಪಂ ಮಾಜಿ ಅಧ್ಯಕ್ಷ ನಾಗರಾಜ್, ಆಟೋ ಧರ್ಮ, ಲಕ್ಷ್ಮಣ್ ಇತರರು ಇದ್ದರು.

## ಭಯೋತ್ಪಾದನೆ ವಿರುದ್ಧ ಒಗ್ಗಟ್ಟಿನ ಹೋರಾಟ ಮುಖ್ಯ



ಬೇಲೂರು: ವಿಶ್ವವನ್ನು ಭಯೋತ್ಪಾದನೆ ಎಂಬ ಪಿಡುಗು ವ್ಯಾಪಕವಾಗಿ ಕಾಡುತ್ತಿದೆ. ಅದು ರಾಷ್ಟ್ರ ಅಭಿವೃದ್ಧಿಗೆ ಅದು ಮಾರಕ ಎಂದು ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಹೇಳಿದರು.

ಪಟ್ಟಣದ ವೀರಶೈವ ಕಲ್ಯಾಣ ಮಂಟಪದಲ್ಲಿ ತಾಲ್ಲೂಕು ವೀರಶೈವ ಲಿಂಗಾಯತ ಮಹಾಸಭಾ ಯುವ ಮತ್ತು ಮಹಿಳಾ ಘಟಕದಿಂದ ಹಮ್ಮಿಕೊಂಡಿದ್ದ ವಿಶ್ವಗುರು ಬಸವಣ್ಣನವರ ಜಯಂತಿ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಭಯೋತ್ಪಾದನೆ ಜಾಗತಿಕ ಮಟ್ಟದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಭಯೋತ್ಪಾದನೆ ಮಟ್ಟ ಹಾಕಲು ಪ್ರಪಂಚದ ಎಲ್ಲಾ ರಾಷ್ಟ್ರಗಳು ಒಟ್ಟಾಗಬೇಕು. ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಧರ್ಮ ಕೇಳಿ ಗುಂಡು ಹಾರಿಸಿರುವುದು ಖಂಡನೀಯ. ಮುಂದಿನ ದಿನಗಳಲ್ಲಿ ಭಯೋತ್ಪಾದನೆಯನ್ನು ಸಂಪೂರ್ಣವಾಗಿ ತಡೆಯದಿದ್ದರೆ ದೇಶಕ್ಕೆ ಅಪಾಯ ಕಟ್ಟಿಟ್ಟ ಬುತ್ತಿ ಎಂದರು.

ದೇಶದಲ್ಲಿ ಜಾತಿ, ಧರ್ಮಾಂಧತೆ ತೊಲಗಲು ಮೊದಲು ಸರ್ಕಾರಗಳು ಓಟಿನ ಆಸೆಯಿಂದ ಜಾತಿ, ಧರ್ಮದ ಹೆಸರಿನಲ್ಲಿ ಯೋಜನೆಗಳನ್ನು ರೂಪಿಸದೆ ಸರ್ವರಿಗೂ ಸಮ ಪಾಲು ನೀಡಬೇಕಿದೆ. ಕಲ್ಯಾಣ ರಾಜ್ಯ ಪರಿಕಲ್ಪನೆಗೆ ಬಸವಣ್ಣನವರ ಆದರ್ಶಗಳು ಮುನ್ನುಡಿ ಬರೆಯಬೇಕು. ಈ ನಿಟ್ಟಿನಲ್ಲಿ ಬೇಲೂರು ಮಹಾಸಭಾ ಬಸವ ಜಯಂತಿ ಕಾರ್ಯಕ್ರಮವನ್ನು ಉತ್ತಮವಾಗಿ ನಡೆಸಿದೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.

ಶಾಸಕ ಹೆಚ್.ಕೆ. ಸುರೇಶ್ ಮಾತನಾಡಿ, ಸಮಾನತೆ ಹರಿಕಾರ ಮತ್ತು ಕ್ರಾಂತಿಯೋಗಿ ಬಸವಣ್ಣ ಅವರು ಸಿದ್ಧಾಂತದಿಂದ ಮಾತ್ರ ದೇಶದಲ್ಲಿ ಸಾಮರಸ್ಯ ಕಾಪಾಡಲು ಸಾಧ್ಯವಾಗುತ್ತದೆ. ಬುದ್ಧ, ಬಸವ, ಅಂಬೇಡ್ಕರ್, ಕನಕರು ಜಗತ್ತಿನಲ್ಲಿ ಸುಖಿ ಬದುಕಿಗೆ ಸಂದೇಶ ನೀಡಿದ್ದಾರೆ. ಅವರ ಆದರ್ಶಗುಣಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕಿದೆ ಎಂದರು.

# ಔಷಧಿ ಇಲ್ಲವೆಂದು ಹೇಳಬೇಡಿ: ಸಂಸದರ ಸೂಚನೆ

## ಸಾರ್ವಜನಿಕ ಸ್ನೇಹಿಯಾಗಿ ಕೆಲಸ ಮಾಡಿ | ವೈದ್ಯರಿಗೆ ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**



ಹಾಸನ: ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿ ಸಿಗುತ್ತಿಲ್ಲ ಎಂಬ ದೂರುಗಳು ವ್ಯಾಪಕವಾಗಿ ಕೇಳಿಬರುತ್ತಿದ್ದು, ಸರ್ಕಾರ ಅಗತ್ಯಕ್ಕೆ ತಕ್ಕಷ್ಟು ಔಷಧಿ ಸಾಮಗ್ರಿ ಕೊಟ್ಟರೂ ಏಕೆ ಸಮಸ್ಯೆ ಹೆಚ್ಚುತ್ತಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಪ್ರಶ್ನಿಸಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಚೇರಿಯ ಡಾ. ಬಿ.ಸಿ. ರಾಯ್ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕೋವಿಡ್ ನಿಯಂತ್ರಣ ಕುರಿತ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಕೋವಿಡ್ ಪರಿಣಾಮವನ್ನು ಎಲ್ಲರೂ ಅನುಭವಿಸಿದ್ದೇವೆ. ಮತ್ತೆ ಪ್ರಕರಣ ವರದಿಯಾಗುತ್ತಿರುವುದರಿಂದ ಮುನ್ನೆಚ್ಚರಿಕೆ ವಹಿಸಬೇಕು. ಯಾವುದೇ ಸಹಾಯ ಬೇಕಿದ್ದರೂ ಸಂಪರ್ಕಿಸಬೇಕು. ಗ್ರಾಮೀಣ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಔಷಧಿ ಸಿಗುತ್ತಿಲ್ಲವೆಂದು ಮಧ್ಯರಾತ್ರಿಯಲ್ಲಿ ನನಗೆ ಸಾರ್ವಜನಿಕರು ಕರೆ ಮಾಡುತ್ತಾರೆ ಎಂದರು.

ಕೋವಿಡ್ ಹಾಗೂ ಡೆಂಘಿ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ವೆಂಟಿಲೇಟರ್, ಆಮ್ಲಜನಕ ಸಾಂದ್ರಕ, ಬೆಡ್ ಗಳು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕು. ಕೋವಿಡ್ ಗಾಗಿಯೇ ಇಂತಿಷ್ಟು ಹಾಸಿಗೆಗಳನ್ನು ಮೀಸಲಿಡಬೇಕು. ಕಳೆದ ಬಾರಿ ಕೋವಿಡ್ ಇದ್ದಾಗ ಯಾವ ರೀತಿ ಕ್ರಮ ಕೈಗೊಳ್ಳಲಾಗಿತ್ತೋ ಅದನ್ನೇ ಮುಂದುವರೆಸಬೇಕು. ಪ್ರಾಣದ ಹಂಗು ತೊರೆದು ಕೆಲಸ ಮಾಡಿದ ವೈದ್ಯರ ಸೇವೆಯನ್ನು ಜನರು ಇಂದಿಗೂ ಸ್ಮರಿಸುತ್ತಾರೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್ ಮಾತನಾಡಿ, ಹಿಮ್ಸ್ ಹಾಗೂ 7 ಸಾರ್ವಜನಿಕ ಆಸ್ಪತ್ರೆಗಳಲ್ಲಿ ವೆಂಟಿಲೇಟರ್, ಆಮ್ಲಜನಕ ಸಾಂದ್ರಕಗಳ ಪರೀಕ್ಷೆ ನಡೆದಿದ್ದು ಶೇ. 95 ರಷ್ಟು ಸುಸಜ್ಜಿತ ಸ್ಥಿತಿಯಲ್ಲಿವೆ. ಪೈಪಿಂಗ್ ಸಿಸ್ಟಂ ಸ್ವಲ್ಪ ದುರಸ್ತಿಯಲ್ಲಿದ್ದು ರಿಪೇರಿ ಮಾಡಬೇಕು. ಜಿಲ್ಲೆಯಲ್ಲಿ ಅಗತ್ಯಕ್ಕೆ ಅನುಗುಣವಾಗಿ ಔಷಧಿ ಸಾಮಾಗ್ರಿ ದಾಸ್ತಾನಿದೆ ಎಂದರು.

ಈಗ ವ್ಯಾಪಿಸುತ್ತಿರುವ ಕೋವಿಡ್ ಅನ್ನು ಓಮಿಕ್ರಾನ್ ಉಪತಳಿ ಎಂದು ಗುರುತಿಸಲಾಗಿದೆ. ಸೌಮ್ಯ ಸ್ವಭಾವದ ಲಕ್ಷಣವನ್ನು ಹೊಂದಿದೆಯಾದರೂ ಗರ್ಭಿಣಿಯರು, ಮಕ್ಕಳು ಹಾಗು ವೃದ್ಧರು ಎಚ್ಚರಿಂದ ಇರಬೇಕು. ರಕ್ತದೊತ್ತಡ, ಮಧುಮೇಹ ಸಮಸ್ಯೆಯಿಂದ ಬಳಲುವವರು ಕಡ್ಡಾಯವಾಗಿ ತಪಾಸಣೆಗೆ ಒಳಗಾಗಬೇಕು. ರೋಗ ನಿರೋಧಕ ಶಕ್ತಿ ಕಡಿಮೆ ಇರುವವರು ಮುಂಜಾಗ್ರತೆ ವಹಿಸಬೇಕು ಎಂದು ತಿಳಿಸಿದರು.

ಹಿಮ್ಸ್‌ನಲ್ಲಿ 100 ಹಾಗು ಸಾರ್ವಜನಿಕ ಆಸ್ಪತ್ರೆಗಳಲ್ಲಿ 10 ಬೆಡ್‌ಗಳನ್ನು ಕಾಯ್ದಿರಿಸಲಾಗಿದೆ. ಅವಶ್ಯಕತೆ ಎನಿಸಿದರೆ ಹಾಸಿಗೆ ಸಂಖ್ಯೆ ಹೆಚ್ಚಿಸಲಾಗುವುದು ಎಂದರು.

ಆಲೂರು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಿಸ್ಸಾರ್ ಫಾತಿಮಾ ಹಾಗೂ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಜಯಪ್ರಕಾಶ್ ಮಾತನಾಡಿ, ತಾಲ್ಲೂಕು ಆಸ್ಪತ್ರೆಗೆ ಲಿಫ್ಟ್ ಇಲ್ಲ. ವಾಹನ ನಿಲುಗಡೆಗೆ ವ್ಯವಸ್ಥೆಯಿಲ್ಲದೆ ತೊಂದರೆಯಾಗಿದೆ. ಇರುವ ಅಲ್ಪ ಜಾಗದಲ್ಲಿ ಸಿಬ್ಬಂದಿ ವಾಹನ ನಿಲ್ಲಿಸಲು ಹೋದರೆ ಸಾರ್ವಜನಿಕರು ಜಗಳ ಮಾಡುತ್ತಾರೆ, ನಮ್ಮ ವಾಹನಗಳನ್ನೇ ಹೊರಗೆ ನಿಲ್ಲಿಸಿ ಎಂದು ಗದರುತ್ತಾರೆ ಎಂದು ಸಮಸ್ಯೆ ಹೇಳಿಕೊಂಡರು. ರಸ್ತೆ ಪಕ್ಕದ ಚರಂಡಿಗೆ ಅಂದಾಜು 100 ಮೀಟರ್ ಸ್ಲ್ಯಾಬ್ ಹಾಕಿದರೆ ಪಾರ್ಕಿಂಗ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ಹಲವು ದಿನಗಳಿಂದ ಮನವಿ ಸಲ್ಲಿಸಿದರೂ ಪಟ್ಟಣ ಪಂಚಾಯಿತಿ ಅಧಿಕಾರಿಗಳು ಗಮನ ಹರಿಸುತ್ತಿಲ್ಲ ಎಂದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ನಾಗಪ್ಪ, ಹಿಮ್ಸ್ ವೈದ್ಯಕೀಯ ಅಧೀಕ್ಷಕ ಡಾ. ರಾಘವೇಂದ್ರ, ಡಾ. ಚೇತನ್ ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿಗಳು ಹಾಜರಿದ್ದರು.

### ಜಿಲ್ಲೆಗೆ 10 ಸಾವಿರ ಕೋವಿಡ್ ಟೆಸ್ಟ್ ಕಿಟ್

ಜಿಲ್ಲೆಯಲ್ಲಿ ಕೋವಿಡ್ ಪರೀಕ್ಷೆಗಾಗಿ ರಾಜ್ಯ ಸರ್ಕಾರ 10 ಸಾವಿರ ಪರೀಕ್ಷಾ ಕಿಟ್ ನೀಡಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ದೇಶಾದ್ಯಂತ ಕೋವಿಡ್ ಪ್ರಕರಣಗಳು ವರದಿಯಾಗುತ್ತಿದ್ದು, ಜಿಲ್ಲೆಯಲ್ಲೂ ಪರೀಕ್ಷೆ ಮಾಡಲಾಗುವುದು. ಪಾಸಿಟಿವ್ ಪ್ರಕರಣಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಆದರೆ ಯಾರೂ ಹೆದರಬಾರದು. ಮಾಸ್ಕ್ ಧರಿಸುವುದು, ಪರಸ್ಪರ ಅಂತರ ಕಾಯುವುದು, ಜನದಟ್ಟಣೆಯಿಂದ ದೂರ ಇರುವುದು ಸೇರಿ ಕೆಲವು ಮಾರ್ಗಸೂಚಿಗಳನ್ನು ಸಾರ್ವಜನಿಕರು ಪಾಲಿಸಬೇಕು ಎಂದರು.

### ಡೆಂಘಿ ಪ್ರಕರಣ ಇಳಿಮುಖ

ಡಿಹೆಚ್‌ಓ ಡಾ. ಅನಿಲ್ ಮಾತನಾಡಿ, ಜಿಲ್ಲೆಯಲ್ಲಿ ಜನವರಿಯಿಂದ ಇಲ್ಲಿವರೆಗೆ 15 ಡೆಂಘಿ ಪ್ರಕರಣ ಪತ್ತೆಯಾಗಿವೆ. ಕಳೆದ ವರ್ಷ ಇದೇ ಅವಧಿಗೆ 122 ಪ್ರಕರಣ ದಾಖಲಾಗಿ ಇಬ್ಬರು ಮೃತಪಟ್ಟಿದ್ದರು. ಆದರೆ ಈ ಬಾರಿ ಕೇವಲ 15 ಜನರಿಗೆ ಡೆಂಘಿ ಕಾಣಿಸಿಕೊಂಡಿದ್ದು ಆಶಾ ಹಾಗೂ ಆರೋಗ್ಯ ಕಾರ್ಯಕರ್ತೆಯರು ಹಳ್ಳಿಗಳಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಮನೆ ಸುತ್ತಲೂ ಸ್ವಚ್ಛತೆ ಕಾಪಾಡುವುದು ಹಾಗು ನೀರು ನಿಲ್ಲದಂತೆ ನೋಡಿಕೊಳ್ಳುವುದು ತುರ್ತು ಅವಶ್ಯವಾಗಿದೆ ಎಂದರು.

# ರಸಗೊಬ್ಬರ ಸಮರ್ಪಕ ದಾಸ್ತಾನು-ನಿರ್ವಹಣೆಗೆ ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಸಕಲೇಶಪುರ: ತಾಲ್ಲೂಕು ಕೃಷಿ ಇಲಾಖೆ ಕಚೇರಿಯಲ್ಲಿ ಹಾಸನದ ಕ್ರಿಬ್ಕೋ ಸಂಸ್ಥೆ ವತಿಯಿಂದ ರಸಗೊಬ್ಬರ ಮಾರಾಟಗಾರರಿಗೆ ರಸಗೊಬ್ಬರ ದಾಸ್ತಾನು ಪಾರದರ್ಶಕ ನಿರ್ವಹಣೆ ಮತ್ತು ದರ ಫಲಕದಲ್ಲಿ ನಿರ್ವಹಿಸಲು ಸಭೆ ನಡೆಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಹಾಯಕ ಕೃಷಿ ನಿರ್ದೇಶಕ ಯು.ಎಂ. ಪ್ರಕಾಶ್ ಕುಮಾರ್ ಮಾತನಾಡಿ, ಪ್ರಸ್ತುತ ರಸಗೊಬ್ಬರಗಳ ವೈಜ್ಞಾನಿಕ ಬಳಕೆಯ ಅವಶ್ಯಕತೆ, ಡಿಎಪಿ ರಸಗೊಬ್ಬರದಲ್ಲಿರುವ ರಂಜಕ ಮತ್ತು ಸಾರಜನಕ ಪೋಷಕಾಂಶಗಳಿಗೆ ಪರ್ಯಾಯ ಸಂಕೀರ್ಣ ರಸಗೊಬ್ಬರಗಳ ಮಾಹಿತಿ ಹಾಗೂ ಅವುಗಳ ಬಳಕೆ ಬಗ್ಗೆ, ಸಹಾಯಧನದಡಿ ಪೂರೈಕೆಯಾಗುವ ಯೂರಿಯಾ ರಸಗೊಬ್ಬರದ ಮಾರಾಟ ಕೃಷಿ ಬಳಕೆಗೆ ಸೀಮಿತವಾಗಿರುವಂತೆ ತಿಳಿಸಿದರು.

ಕೃಷಿ ಪರಿಕರಗಳಾದ ರಸಗೊಬ್ಬರ, ಬಿತ್ತನೆ ಬೀಜ ಮತ್ತು ಪೀಡೆನಾಶಕಗಳು ಅಗತ್ಯ ವಸ್ತುಗಳ ಕಾಯ್ದೆಗೆ ಒಳಪಡುವುದರಿಂದ ಆಯಾ ಪರಿಕರಗಳ ಪ್ರತ್ಯೇಕ ಕಾನೂನು ನಿಯಮಗಳಿಗನುಗುಣವಾಗಿ ರೈತರಿಗೆ ಅವುಗಳ ಸಮರ್ಪಕ ಪೂರೈಕೆ, ನಿರ್ವಹಣೆ ಹಾಗೂ ಗುಣಮಟ್ಟ ನಿಯಂತ್ರಣದ ಪರಿಪಾಲನೆ ಬಗ್ಗೆ ಕೃಷಿ ಪರಿಕರಗಳ ಮಾರಾಟಗಾರರಿಗೆ ಎಚ್ಚರಿಕೆ ನೀಡಿದರು.

ಕ್ರಿಬ್ಕೋ ಸಂಸ್ಥೆಯ ಕ್ಷೇತ್ರಾಧಿಕಾರಿ ಪ್ರದೀಪ್ ಅವರು ರಸಗೊಬ್ಬರಗಳನ್ನು ತಂತ್ರಾಂಶದಲ್ಲಿ ನೋಂದಣಿ ಮಾಡುವ ಬಗ್ಗೆ ಮಾಹಿತಿ ನೀಡಿದರು.

ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಕೇಶವಮೂರ್ತಿ ಮಾತನಾಡಿ, ವಿವಿಧ ಕೃಷಿ ಪರಿಕರಗಳ ಗುಣ ನಿಯಂತ್ರಣ ಸಂಬಂಧಿತ ಕಾಯ್ದೆಗಳು ಮತ್ತು ಅಗತ್ಯ ವಸ್ತು ಕಾಯ್ದೆ ಬಗ್ಗೆ ಕೃಷಿ ಪರಿಕರಗಳ ಮಾರಾಟಗಾರರಿಗೆ ಅಗತ್ಯವಾದ ತರಬೇತಿ ನೀಡಿದರು.

ತಾಂತ್ರಿಕ ಅಧಿಕಾರಿ ಅಜಿತ್ ಪ್ರಸಾದ್ ಮಾತನಾಡಿ, ಕೃಷಿ ಇಲಾಖೆಯ ಕೇಂದ್ರ ಕಚೇರಿಯಿಂದ ರಸಗೊಬ್ಬರ ಮತ್ತು ಇತರೆ ಕೃಷಿ ಪರಿಕರಗಳಿಗೆ ಸಂಬಂಧಪಟ್ಟಂತೆ ರವಾನೆಯಾಗಿರುವ ಸೂಚನೆಗಳನ್ನು ತಿಳಿಸಿದರು.

ಕೃಷಿಕ ಸಮಾಜದ ತಾಲ್ಲೂಕು ಅಧ್ಯಕ್ಷ ಹೆತ್ತೂರು ದೇವರಾಜು ಮಾತನಾಡಿ, ನಿಗದಿ ದರಕ್ಕಿಂತ ಹೆಚ್ಚಿನ ಧರಕ್ಕೆ ಟಿಎಪಿಸಿಎಂಎಸ್ ನಲ್ಲಿ ಮಾರಾಟವಾದ ರಸಗೊಬ್ಬರದ ಬಗ್ಗೆ ಪ್ರಸ್ತಾಪಿಸಿ ಅಧಿಕಾರಿಗಳು ಕ್ರಮವಹಿಸಲು ಕೋರಿದರು.

ಕರ್ನಾಟಕ ರಾಜ್ಯ ಬೀಜ ನಿಗಮದ, ಹಾಸನ ಶಾಖೆಯ ವ್ಯವಸ್ಥಾಪಕ ರಾಜೇಶ್ ಮಾತನಾಡಿ, ಕೃಷಿ ಇಲಾಖೆ ಸಕಲೇಶಪುರಕ್ಕೆ ಅಗತ್ಯವಿರುವ ಭತ್ತದ ದೃಢೀಕೃತ ಬಿತ್ತನೆ ಬೀಜಗಳನ್ನು ಸಮರ್ಪಕವಾಗಿ ಪೂರೈಸುವುದಾಗಿ ತಿಳಿಸಿದರು.

ಸಕಲೇಶಪುರ ತಾಲ್ಲೂಕಿನ ರಸಗೊಬ್ಬರ ಮಾರಾಟಗಾರರ ಸಂಘದ ಅಧ್ಯಕ್ಷರಾದ ಅಜಿತ್ ಕುಮಾರ್, ಗೌರವಾಧ್ಯಕ್ಷ ಶಶಿಧರ್, ಕಾರ್ಯದರ್ಶಿ ರಾಜ್ ಕುಮಾರ್, ಟಿಎಪಿಸಿಎಂಎಸ್ ಅಧ್ಯಕ್ಷ ಶಶಿಕುಮಾರ್, ಜಿಲ್ಲಾ ಪ್ಲಾಂಟರ್ಸ್ ಸಂಘದ ಕಾರ್ಯದರ್ಶಿ ಲೋಹಿತ್ ಕೌಡಳ್ಳಿ, ತಾಂತ್ರಿಕ ವ್ಯವಸ್ಥಾಪಕ ಶ್ರವಣ್, ಕೃಷಿ ಅಧಿಕಾರಿ ಕೇಶವಮೂರ್ತಿ, ತಾಂತ್ರಿಕ ಅಧಿಕಾರಿ ಅಜಿತ್ ಪ್ರಸಾದ್ ಇತರರಿದ್ದರು.

# ಕೊಣನೂರು ಭಾಗದಲ್ಲಿ ಜನಜೀವನ ಅಸ್ತವ್ಯಸ್ತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಕೊಣನೂರು: ಅರಕಲಗೂಡು ತಾಲ್ಲೂಕು ಕೊಣನೂರು, ರಾಮನಾಥಪುರ ಹೋಬಳಿ ವ್ಯಾಪ್ತಿಯಲ್ಲಿ ಸೋಮವಾರ ಜೋರು ಮಳೆ ಸುರಿದು ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ ಮಾತ್ರವಲ್ಲದೆ ಕಾವೇರಿ ಕೊಳ್ಳದಲ್ಲಿ ಪ್ರವಾಹ ಭೀತಿ ಎದುರಾಗಿದೆ.

ಕೊಡಗಿನ ಗಡಿಭಾಗವಾದ ಕೊಣನೂರು ಸುತ್ತಮುತ್ತ ನಿರಂತರ ಮಳೆ ಸುರಿಯುತ್ತಿದೆ. ಮನೆಯಿಂದ ಹೊರಬರಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿ ಮಕ್ಕಳು, ಮಹಿಳೆಯರು ಗೃಹಬಂಧಿಯಾಗಿದ್ದಾರೆ.

ಪ್ರವಾಹ ಭೀತಿ: ಪೂರ್ವ ಮುಂಗಾರು ಕೇರಳ ಮತ್ತು ಕೊಡಗು ಭಾಗಕ್ಕೆ ಪ್ರವೇಶ ಮಾಡಿರುವ ಕಾರಣ ಕಾವೇರಿ ನದಿಯ ನೀರಿನ ಮಟ್ಟ ಹೆಚ್ಚಳವಾಗಿದೆ. ಕಾವೇರಿ ನದಿಯಲ್ಲಿ ಏಕಾಏಕಿ ನೀರಿನ ಪ್ರಮಾಣ ಹೆಚ್ಚಾಗಿರುವುದರಿಂದ ಅಚ್ಚುಕಟ್ಟು ಪ್ರದೇಶದ ನಿವಾಸಿಗಳಿಗೆ ಪ್ರವಾಹ ಭೀತಿ ಎದುರಾಗಿದೆ. ಮುಂದಿನ ಮೂರ್ನಾಲ್ಕು ದಿವಸ ಇದೇ ರೀತಿ ಮಳೆ ಸುರಿದರೆ ಜನರು ಸ್ಥಳಾಂತರವಾಗಬೇಕಾಗುತ್ತದೆ. ಜೊತೆಗೆ ರಾಮನಾಥಪುರ ಸೇತುವೆ ವೀಕ್ಷಣೆಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಲಗ್ಗೆ ಇಡುತ್ತಿದ್ದಾರೆ. ಜೋರು ಮಳೆ ನಡುವೆಯೂ ದಂಪತಿ, ಯುವಕ, ಯುವತಿಯರು ನದಿ ವೀಕ್ಷಣೆಗೆ ಬರುತ್ತಿದ್ದು ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಬಂದೋಬಸ್ತ್ ವಹಿಸಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

# ವಕ್ಫ್ ಬೋರ್ಡ್‌ಗೆ ಶಾಫೀ ಸಅದಿ ನೇಮಕ ವಾಪಾಸ್‌ಗೆ ಆಗ್ರಹ



ಹಾಸನ: ರಾಜ್ಯ ವಕ್ಫ್ ಬೋರ್ಡ್ ಉಪಾಧ್ಯಕ್ಷರಾಗಿ ನೇಮಕವಾಗಿರುವ ಶಾಫೀ ಸಅದಿ ಅವರ ವಿರುದ್ಧ ವ್ಯಾಪಕ ಭ್ರಷ್ಟಾಚಾರ ಆರೋಪಗಳಿದ್ದು ಅವರ ನೇಮಕವನ್ನು ಅಸಿಂಧುಗೊಳಿಸಬೇಕು ಎಂದು ಆಗ್ರಹಿಸಿ ವೀರ ಕನ್ನಡಿಗ ಟಿಪ್ಪು ಸೇನೆ ವತಿಯಿಂದ ಸೋಮವಾರ ಜಿಲ್ಲಾಡಳಿತ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.


ಅಪರ ಜಿಲ್ಲಾಧಿಕಾರಿ ಕೆ.ಟಿ. ಶಾಂತಲಾ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ರಾಜ್ಯ ಅಲ್ಪಸಂಖ್ಯಾತ ಮುಸ್ಲಿಂ ಧಾರ್ಮಿಕ ಆಸ್ತಿ ಹಿತರಕ್ಷಣಾ ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಸಮೀರ್ ಅಹಮದ್, ರಾಜ್ಯ ವಕ್ಫ್ ಬೋರ್ಡ್‌ಗೆ ಚುನಾವಣೆ ನಡೆದು ಎರಡು ತಿಂಗಳು ಬಳಿಕ ಶಾಫೀ ಸಅದಿ ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಶಾಫೀ ಸಅದಿ ಅವರು ಈ ಹಿಂದೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಬೋರ್ಡ್ ಅಧ್ಯಕ್ಷರಾಗಿದ್ದರು. ಆಡಳಿತಾವಧಿಯಲ್ಲಿ ಸಾಕಷ್ಟು ಭ್ರಷ್ಟಚಾರ, ವಕ್ಫ್ ಬೋರ್ಡ್ ಆಸ್ತಿಯನ್ನು ಅನಧಿಕೃತವಾಗಿ ಗುತ್ತಿಗೆ ನೀಡಿರುವ ಆರೋಪಗಳಿವೆ. ಅವರ ವಿರುದ್ಧ ಬೆಂಗಳೂರಿನ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ಎಫ್‌ಐಆರ್ ಸಹ ದಾಖಲಾಗಿದೆ. ವಕ್ಫ್‌ಗೆ ಸೇರಿದ ಕೋಟ್ಯಾಂತರ ರೂ. ಬೆಲೆ ಬಾಳುವ ಆಸ್ತಿಯನ್ನು ಮಾರಾಟ ಮಾಡಿರುವ ಗಂಭೀರ ಆರೋಪಗಳಿವೆ. ಇಷ್ಟೆಲ್ಲಾ ಗುರುತರ ಆಪಾದನೆಗಳಿದ್ದರೂ ಸರ್ಕಾರ ಅವರಿಗೆ ಮಣೆ ಹಾಕಿರುವುದು ಸಂಶಯ ಮೂಡಿಸಿದೆ ಎಂದರು.

ವಕ್ಫ್ ಬೋರ್ಡ್ ಉಪಾಧ್ಯಕ್ಷ ಸ್ಥಾನವನ್ನು ಅವರು ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆ ಹೆಚ್ಚಿದೆ. ಅದರಿಂದ ರಾಜ್ಯ ಸರ್ಕಾರ ಹಾಗು ಮುಸ್ಲಿಂ ಸಮುದಾಯಕ್ಕೆ ಕೆಟ್ಟ ಹೆಸರು ಬರುತ್ತದೆ. ಹೀಗಾಗಿ ಅವರ ನೇಮಕ ವಾಪಾಸ್ ಪಡೆಯಬೇಕು ಎಂದು ಒತ್ತಾಯಿಸಿದರು. ವೀರ ಕನ್ನಡಿಗ ಟಿಪ್ಪು ಸೇನೆ ಸಂಸ್ಥಾಪಕ ಅಧ್ಯಕ್ಷ ಅಕ್ಮಲ್ ಜಾವೀದ್, ಅಮೀರ್ ಜಾನ್ ಇತರರಿದ್ದರು.

# ರುದ್ರಪಟ್ಟಣದಲ್ಲಿ ಅದ್ದೂರಿ ಸಂಗೀತೋತ್ಸವ

## ನಟ ಶ್ರೀನಿವಾಸಪ್ರಭುಗೆ ಪ್ರಶಸ್ತಿ ಪ್ರದಾನ | ಸಂಗೀತ ರಸದೌತಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಅರಕಲಗೂಡು: ತಾಲ್ಲೂಕಿನ ರುದ್ರಪಟ್ಟಣದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ 22ನೇ ವಾರ್ಷಿಕ ಸಂಗೀತೋತ್ಸವದಲ್ಲಿ ಹಿರಿಯ ಸಾಹಿತಿ ಶ್ರೀನಿವಾಸ ಪ್ರಭು ಅವರಿಗೆ 2025ನೇ ಸಾಲಿನ ನಾಚಾರಮ್ಮ ಪ್ರಶಸ್ತಿ ಹಾಗೂ ನಟನ ಕಲಾ ಸ್ವರ್ಣಮಣಿ ಬಿರುದು ಪ್ರದಾನ ಮಾಡಲಾಯಿತು.

ವಿದ್ವಾನ್ ಆರ್.ಕೆ. ಪದ್ಮನಾಭ, ಸದ್ಗುರು ಶ್ರೀ ಮಧುಸೂದನ ಸಾಯಿ, ಕರ್ನಾಟಕ ಬ್ಯಾಂಕ್ ಸಿಇಒ ಎಚ್. ಕೃಷ್ಣನ್, ಹಿರಿಯ ಕಲಾವಿದ ಆರ್. ಎನ್. ತ್ಯಾಗರಾಜನ್, ತಾರಾನಾಥನ್, ಡಾ. ಶ್ರೀಲತಾ ಅವರು ಪ್ರಶಸ್ತಿ ನೀಡಿ ಗೌರವಿಸಿದರು.

ವಿದ್ವಾನ್ ಆರ್.ಕೆ.ಪದ್ಮನಾಭ ಮಾತನಾಡಿ, ಕಳೆದ 22 ವರ್ಷಗಳಿಂದಲೂ ಕೂಡ ಕಲಾ ಸೇವೆಯಲ್ಲಿ ತೊಡಗಿರುವ ದಿಗ್ಗಜರನ್ನು ಗುರುತಿಸಿ ಪ್ರಶಸ್ತಿ, ಬಿರುದು ನೀಡಿ ಗೌರವಿಸಲಾಗುತ್ತಿದೆ.

ಪ್ರತಿವರ್ಷ ರುದ್ರಪಟ್ಟಣದಲ್ಲಿ ಹಮ್ಮಿಕೊಳ್ಳುವ ಸಂಗೀತೋತ್ಸವದಲ್ಲಿ ಎಲ್ಲರ ಸಹಕಾರ ದೊರೆಯುತ್ತಿದೆ. ಐದು ದಿನಗಳ ಕಾಲ ನಡೆಯುವ ಸಂಗೀತೋತ್ಸವ ಸಂಗೀತ ಹಬ್ಬದಂತೆ ಸಂಭ್ರಮದಿಂದ ಕೂಡಿರುತ್ತದೆ ಎಂದು ಹರ್ಷ ವ್ಯಕ್ತಪಡಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶ್ರೀನಿವಾಸ ಪ್ರಭು ಅವರು, ಸಂಗೀತ ಗ್ರಾಮ ರುದ್ರಪಟ್ಟಣದಲ್ಲಿ ಸಂಗೀತ ವಿದ್ವಾನ್ ಆರ್.ಕೆ.ಪದ್ಮನಾಭ ಅವರಿಂದ ಪ್ರಶಸ್ತಿ,

ಬಿರುದು ನನಗೆ ದೊರೆತಿರುವುದು ನನ್ನ ಕಲಾ ಸೇವೆ. ಸಾಹಿತ್ಯ ಸೇವೆಗೆ ಸಿಕ್ಕ ದೊಡ್ಡ ಪ್ರಶಸ್ತಿ ಎಂದು ಮನಪೂರ್ವಕವಾಗಿ ಹರ್ಷ ವ್ಯಕ್ತಪಡಿಸುತ್ತೇನೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ರುದ್ರಪಟ್ಟಣ ಪರಂಪರೆಯ ಹಿರಿಯ ವಿದ್ವಾಂಸರು ಹಾಗೂ ವರ್ಧಿಷ್ಣು ಕಲಾವಿದರಾದ ಕೆ. ಸರಸ್ವತಿ, ಎಚ್.ಕೆ. ನಾಗಮ್ಮ, ಬಿ.ಜಿ. ಶ್ರೀನಿವಾಸ್, ಆರ್.ಎನ್. ತ್ಯಾಗರಾಜನ್, ಡಾ. ಆರ್.ಎನ್. ತಾರಾನಾಥನ್, ಡಾ. ಆರ್.ಎನ್. ಶ್ರೀಲತಾ, ಮಾಲತಿ ಶರ್ಮ, ರತ್ನಮಾಲ ಪ್ರಕಾಶ್, ಆರ್. ಕೆ. ಶ್ರೀರಾಮ್ ಕುಮಾರ್, ಆರ್. ಕೆ. ರಾಘವನ್, ಆರ್. ಕೆ. ಶಂಕರ್, ಆರ್. ಕೆ. ಪ್ರಕಾಶ್, ಆರ್. ಕೆ. ಪ್ರಸನ್ನ ಕುಮಾರ್, ಆರ್.ಕೆ. ಪದ್ಮನಾಭ (ವೀಣೆ), ರಮೇಶ್ ರುದ್ರಪಟ್ಟಣ, ರುದ್ರಪಟ್ಟಣ ಸು. ರಾಮನಾಥನ್, ಆರ್. ವಿ. ವಸಂತಲಕ್ಷ್ಮೀ ಹಾಗೂ ಹಿರಿಯ ರಂಗ ಕಲಾವಿದರಾದ ಜಯಸಿಂಹ ಮುಸುರಿ, ಗುರುದತ್ತ ಮುಸುರಿ, ಆರ್.ಕೆ. ಗೀತಮಣಿ ಮತ್ತು ಗಮಕ ಕಲಾವಿದರಾದ ಆರ್. ಎಲ್. ಪದ್ಮ, ಅನ್ನಪೂರ್ಣ ನಾಗೇಂದ್ರ ಹಾಗೂ ಕಲಾ ಪೋಷಕರಾದ ಆರ್.ಆರ್. ರವಿಶಂಕರ್ ಅವರುಗಳಿಗೆ ಬಿರುದು ಪ್ರದಾನ ಹಾಗೂ ಗೌರವ ಸಮರ್ಪಣೆ ಮಾಡಲಾಯಿತು.

ಹಿರಿಯ ಸಂಗೀತ ವಿದ್ವಾಂಸರು ಮತ್ತು ಯುವ ಸಂಗೀತ ಕಲಾವಿದರಾದ ವಿದ್ವಾನ್ ಸಂಗೀತಾ ತಾರಾನಾಥನ್, ಲಕ್ಷ್ಮಿ ನಾಗರಾಜ್, ಇಂದು ನಾಗರಾಜ್, ಅಕ್ಷತಾ ರುದ್ರಪಟ್ಟಣ, ಎಂ.ಎಸ್. ದೀಪಕ್, ಧನ್ಯಾ ದಿನೇಶ್ ರುದ್ರಪಟ್ಟಣ, ರೇಣುಕಾ ರುದ್ರಪಟ್ಟಣ, ವರ್ಷಾ ಕೃಷ್ಣ, ಡಾ. ಸಂಜನಾ ಕೌಶಿಕ್, ಕೆ.ಆರ್. ಶ್ರೀಲತಾ, ಆರ್.ಸಿ. ವಿಜೇಶ್, ಆರ್.ಪಿ. ಕೌಶಿಕ್, ರಾಕೇಶ್ ದತ್ತ, ಪ್ರಶಾಂತ್ ರುದ್ರಪಟ್ಟಣ, ಪ್ರಮೋದ್ ರುದ್ರಪಟ್ಟಣ, ಸಂಜಯ್ ತಾರಾನಾಥನ್, ಕೇಶವ ದತ್ತ ಹಾಗೂ ಯುವ ನೃತ್ಯ ಕಲಾವಿದರಾದ ವಿದ್ವಾನ್ ಮೇಘಾ ಶ್ರೀನಿವಾಸ್, ಭಾರದ್ವಾಜ್, ಸವಿತಾ ಹರೀಶ್, ವೈಷ್ಣವಿ, ಕೌಂಡಿನ್ಯ, ವಿ. ಸಂಜನಾ ಶ್ರೀನಿಧಿ ಅವರನ್ನು ಗೌರವಿಸಲಾಯಿತು.

ರಂಜಿಸಿದ ಸಂಗೀತ ಗಾಯನ: ಪ್ರಶಸ್ತಿ ಪ್ರದಾನ ಸಮಾರಂಭಕ್ಕೂ ಮುನ್ನ ನಡೆದ ಸಂಗೀತೋತ್ಸವದಲ್ಲಿ ವಿದ್ವಾನ್ ಅಕ್ಷತಾ ರುದ್ರಪಟ್ಟಣ ಅವರು ಎರಡು ತಾಸು ನಿರಂತರವಾಗಿ ಗಾಯನ ಕಚೇರಿ ಪ್ರಸ್ತುತ ಪಡಿಸಿ ಪ್ರೇಕ್ಷಕರನ್ನು ನಾದಲೋಕದಲ್ಲಿ ತೇಲಿಸಿದರು.

# ಇತಿಹಾಸದಲ್ಲಿ ಈ ದಿನ

## ಮೇ -28

ಮೆನ್ಸ್ಟ್ರುಯಲ್ ಹೈಜಿನ್ ಡೇ. ಮೆ 28ರಂದು ಪ್ರತಿವರ್ಷ ಮೆನ್ಸ್ಟ್ರುಯಲ್ ಹೈಜಿನ್ ಡೇ ಆಚರಿಸಲಾಗುತ್ತದೆ. ಈ ದಿನದ ಉದ್ದೇಶವು ಮಹಿಳೆಯರ ಮತ್ತು ಬಾಲಕಿಯರ ಮಾಸಿಕ ಸ್ವಚ್ಛತೆಯ ಕುರಿತು ಜಾಗೃತಿ ಮೂಡಿಸುವುದು.

**1937:** ಜರ್ಮನಿಯಲ್ಲಿ ವೋಲ್ಕ್ಸ್‌ವಾಗನ್ ಕಂಪನಿಯು ಸ್ಥಾಪಿತವಾಯಿತು. ಈ ಕಂಪನಿ ವಿಶ್ವದ ಪ್ರಮುಖ ಕಾರು ತಯಾರಕರಲ್ಲಿ ಒಂದಾಗಿದೆ.

**1998:** ಪಾಕಿಸ್ತಾನವು ಐದು ಅಣು ಪರೀಕ್ಷೆಗಳನ್ನು ನಡೆಸಿತು. ಇದು ಭಾರತದ ಅಣು ಪರೀಕ್ಷೆಗಳಿಗೆ ಪ್ರತಿಸ್ಪಂದನೆಯಾಗಿ ನಡೆದಿದ್ದು, ಜಾಗತಿಕ ಮಟ್ಟದಲ್ಲಿ ಚರ್ಚೆಗೆ ಕಾರಣವಾಯಿತು.

**1964:** ಭಾರತದ ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರ ಅಂತ್ಯಕ್ರಿಯೆ ನವದೆಹಲಿಯ ಶಾಂತಿವನದಲ್ಲಿ ಸರ್ಕಾರಿ ಗೌರವಗಳೊಂದಿಗೆ ನಡೆಯಿತು.

**1965:** ಜಾರ್ಖಂಡ್‌ನ ಧೋರಿ ಗಣಿಯಲ್ಲಿ ಸಂಭವಿಸಿದ ಸ್ಫೋಟದಲ್ಲಿ ಸುಮಾರು 400 ಮಂದಿ ಕಾರ್ಮಿಕರು ಮೃತಪಟ್ಟರು. ಈ ದುರಂತವು ಗಣಿಗಾರಿಕೆ ಕ್ಷೇತ್ರದಲ್ಲಿ ಸುರಕ್ಷತಾ ಕ್ರಮಗಳ ಅಗತ್ಯತೆಯನ್ನು ಎತ್ತಿ ತೋರಿಸಿತು.

**2010:** ಪಶ್ಚಿಮ ಬಂಗಾಳದ ಪಶ್ಚಿಮ ಮೇದಿನಿಪುರ ಜಿಲ್ಲೆಯಲ್ಲಿ ಜ್ಞಾನೇಶ್ವರಿ ಎಕ್ಸ್‌ಪ್ರೆಸ್ ರೈಲು ಪಟಪಟಾಂತರಗೊಂಡು, ಇನ್ನೊಂದು ರೈಲಿಗೆ ಡಿಕ್ಕಿ ಹೊಡೆದು 148 ಮಂದಿ ಪ್ರಯಾಣಿಕರು ಮೃತಪಟ್ಟರು.

### ಜನನ

**1883:** ವಿನಾಯಕ ದಾಮೋದರ ಸಾವರ್ಕರ್. ಭಾರತೀಯ ಸ್ವಾತಂತ್ರ್ಯ ಹೋರಾಟಗಾರ, ಲೇಖಕ ಮತ್ತು ರಾಜಕಾರಣಿ.

**1908:** ಇಯಾನ್ ಫ್ಲೆಮಿಂಗ್. ಬ್ರಿಟಿಷ್ ಲೇಖಕ,
ಪ್ರಸಿದ್ಧ ಜೇಮ್ಸ್ ಬಾಂಡ್ ಕಾದಂಬರಿಗಳ ರಚನೆಕಾರ.

**1923:** ನಂದಮೂರಿ ತಾರಕ ರಾಮಾರಾವ್. ಭಾರತೀಯ ನಟ, ನಿರ್ದೇಶಕ ಮತ್ತು ರಾಜಕಾರಣಿ.

**1944:** ರೂಡಿ ಜುಲಿಯಾನಿ. ಅಮೆರಿಕದ ರಾಜಕಾರಣಿ ಮತ್ತು ಕಾನೂನು ತಜ್ಞ.

**1968:** ಕೈಲಿ ಮಿನೋಗ್. ಆಸ್ಟ್ರೇಲಿಯಾದ ಗಾಯಕಿ, ನಟಿ ಮತ್ತು ನಿರ್ಮಾಪಕಿ.

### ಮರಣ

**1843:** ನೋವಾಹ್ ವೆಬ್ಸ್ಟರ್. ಅಮೆರಿಕದ ಭಾಷಾಶಾಸ್ತ್ರಜ್ಞ ಮತ್ತು ಲೇಖಕ

**1937:** ಆಲ್ಫ್ರೆಡ್ ಆಡ್ಲರ್. ಆಸ್ಟ್ರಿಯನ್ ಮನೋವೈದ್ಯ.

**1971:** ಆಡಿ ಮರ್ಫಿ. ಅಮೆರಿಕದ ಯೋಧ ಮತ್ತು ನಟ, ಎರಡನೇ ವಿಶ್ವಯುದ್ಧದ ಅತ್ಯಂತ ಪುರಸ್ಕೃತ ಯೋಧ.

**1972:** ಬ್ರಿಟನ್‌ನ ರಾಜ, ರಾಜಕೀಯ ಕಾರಣಗಳಿಂದಾಗಿ ಸಿಂಹಾಸನ ತ್ಯಜಿಸಿದವರು.

**2014:** ಮಾಯಾ ಆಂಜೆಲೋ. ಅಮೆರಿಕದ ಕವಿ, ಲೇಖಕಿ ಮತ್ತು ನಾಗರಿಕ ಹಕ್ಕುಗಳ ಹೋರಾಟಗಾರ್ತಿ.


# ಪಂಜ ಕುಸ್ತಿ: ಶಾರದ ರಾಷ್ಟ್ರ ಮಟ್ಟಕ್ಕೆ ಆಯ್ಕೆ



ಆಲೂರು: ತಾಲ್ಲೂಕಿನ ಕಿರಗಡಲು ಗ್ರಾಮದ ವಕೀಲೆ ಕೆ.ವೈ. ಶಾರದ ಅವರು ಇತ್ತೀಚೆಗೆ ಮೈಸೂರಿನಲ್ಲಿ ನಡೆದ 13ನೇ ರಾಜ್ಯ ಮಟ್ಟದ ಪಂಜ ಕುಸ್ತಿ ಕ್ರೀಡೆಯಲ್ಲಿ ಸೀನಿಯರ್ ವುಮೆನ್ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಆಗಸ್ಟ್‌ನಲ್ಲಿ ಪಂಜಾಬ್‌ನ ಲೂಧಿಯಾನದಲ್ಲಿ ರಾಷ್ಟ್ರೀಯ ಪಂಜ ಕುಸ್ತಿ ಪಂದ್ಯಾವಳಿ ನಡೆಯಲಿದೆ. ಶಾರದ ಅವರು ಓವರ್‌ಆಲ್ ಚಾಂಪಿಯನ್ ಶಿಪ್ ಕರ್ನಾಟಕ ಕಿತ್ತೂರು ಚನ್ನಮ್ಮ ಟೈಟಲ್ ಸಹ ಪಡೆದಿದ್ದಾರೆ.

# ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುವೆ: ಶಾಸಕ ಸುರೇಶ್



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಚುನಾವಣಾ ಪೂರ್ವದಲ್ಲಿ ಕೊಟ್ಟ ಮಾತಿನಂತೆ ತಾಲ್ಲೂಕಿನ ಎಲ್ಲಾ ಗ್ರಾಮಗಳ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದೇನೆ ಎಂದು ಶಾಸಕ ಹೆಚ್.ಕೆ. ಸುರೇಶ್ ಹೇಳಿದರು.

ತಾಲ್ಲೂಕಿನ ಆಂದಲೆ ಗ್ರಾಮದಲ್ಲಿ 60 ಲಕ್ಷ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಬೇಲೂರು ಹಾಸನ ಮುಖ್ಯರಸ್ತೆಯಿಂದ ಆಂದಲೆ ವರೆಗೂ ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ. ಅದೇ ರೀತಿ ಅತಿ ಶೀಘ್ರದಲ್ಲೇ ಆಂದಲೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಸರ್ವಾಂಗೀಣ ಅಭಿವೃದ್ಧಿಗೆ 2 ಕೋಟಿ ರೂ. ವೆಚ್ಚದ ಕಾಮಗಾರಿಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಚಂದ್ರಕಲಾ ರಮೇಶ್, ಸದಸ್ಯರಾದ ಎ.ಪಿ. ಸೋಮಶೇಖರ್, ತಿಮ್ಮಜ್ಜಿ, ಮಂಜುಳ ಮಲ್ಲೇಶ್, ಉಪನ್ಯಾಸಕ ಹರೀಶ್, ಲೋಕೇಶ್, ದಿಶಾಂತ್ ಕುಮಾರ್, ಮಲ್ಲಿಕಾರ್ಜುನ, ಯೋಗೇಶ್, ಮಹೇಶ್, ಉಮಾ, ಗ್ರಾ.ಪಂ. ಮಾಜಿ ಅಧ್ಯಕ್ಷೆ ಲೀಲಾವತಿ ಇತರರಿದ್ದರು.

# ಮಾನವ ಸಂಪನ್ಮೂಲ ರಾಷ್ಟ್ರೀಯ ಆಸ್ತಿ: ನಿಸಾರ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ಮಾನವ ಸಂಪನ್ಮೂಲ ರಾಷ್ಟ್ರೀಯ ಆಸ್ತಿಯಾಗಿಬೇಕೆಂಬ ಉದ್ದೇಶ ಈಡೇರಬೇಕೆಂದರೆ ಯಾವ ಮಗುವೂ ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು ಎಂದು ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮದ್ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಪ್ರಾಥಮಿಕ ಹಂತದಿಂದಲೇ ಮಕ್ಕಳ ಶೈಕ್ಷಣಿಕ ಚಟುವಟಿಕೆಗೆ ಆದ್ಯತೆ ನೀಡಬೇಕು. ಆಗಮಾತ್ರ ಮುಂದಿನ ತರಗತಿಗಳಲ್ಲಿ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು. ಒಂದನೇ ತರಗತಿಯಿಂದ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿದರೆ 10ನೇ ತರಗತಿಯ ಫಲಿತಾಂಶ ಸುಧಾರಣೆ ಆಗುತ್ತದೆ ಎಂದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಮಕ್ಕಳು ಪುನಃ ಪರೀಕ್ಷೆಗೆ ಹಾಜರಾಗಿದ್ದಾರಾ ಎಂಬುದರ ಬಗ್ಗೆ ಪರಿಶೀಲನೆ ಮಾಡಬೇಕು. ಎಷ್ಟು ಮಕ್ಕಳು ಪರೀಕ್ಷೆಗೆ ಹಾಜರಾಗಿರುವುದಿಲ್ಲ ಅಂತಹ ಮಕ್ಕಳ ಮುಂದಿನ ಭವಿಷ್ಯದ ಬಗ್ಗೆ ಚಿಂತನೆ ನಡೆಸಬೇಕು ಎಂದು ತಿಳಿಸಿದರು.

ಮಕ್ಕಳ ಶೈಕ್ಷಣಿಕ ಕಲಿಕೆಗೆ ಏನು ತೊಂದರೆ ಇದೆ ಎಂಬುದನ್ನು ಮನಗಾಣಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿ ಪತ್ತೆ ಹಚ್ಚಬೇಕು. 2011ರ ಜನಗಣತಿ ಪ್ರಕಾರ ಭಾರತದಲ್ಲಿ ಶೇ. 43.76ರಷ್ಟು ಮುಸ್ಲಿಂ ಸಮುದಾಯದವರು ಅನಕ್ಷರಸ್ಥರಿದ್ದಾರೆ ಎಂದರು.

ಜಿಲ್ಲಾ ಸಮಿತಿ ನೂತನ ಸದಸ್ಯರು ಅಧಿಕಾರಿಗಳೊಂದಿಗೆ ಕೈಜೋಡಿಸಿ ಶಾಲೆಯಿಂದ ಹೊರಗುಳಿದ ಮಕ್ಕಳ ಪೋಷಕರ ಮನವೊಲಿಸಿ ಮಕ್ಕಳನ್ನು ಶಾಲೆಗೆ ಕಳುಹಿಸಲು ತಿಳವಳಿಕೆ ನೀಡಬೇಕು. ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಬೇಕು ಎಂದು ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿರುವ ಒಟ್ಟು 2691 ಅಂಗನವಾಡಿ ಕೇಂದ್ರಗಳಲ್ಲಿ ನಗರ ಪ್ರದೇಶಗಳಲ್ಲಿರುವ 136 ಅಲ್ಪಸಂಖ್ಯಾತರ ಅಂಗನವಾಡಿ ಕೇಂದ್ರಗಳ ನಕ್ಷೆಯೊಂದಿಗೆ ಮಾಹಿತಿ ನೀಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ನಗರ ಪ್ರದೇಶಗಳಲ್ಲಿ ಸ್ವಂತ ಅಥವಾ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳ ಬಗ್ಗೆ ಏನಾದರೂ ಸಮಸ್ಯೆಗಳಿದ್ದರೆ ಪಟ್ಟಿ ಮಾಡಿ ನೀಡುವಂತೆ ತಿಳಿಸಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಸಾಲ ಸೌಲಭ್ಯ ಒದಗಿಸಲಾಗುತ್ತದೆ. ಮೊದಲ ಬಾರಿಗೆ 10 ಸಾವಿರ ರೂ. ನೀಡಲಾಗುತ್ತದೆ. ಅದನ್ನು ತಿರುವಳಿ ಮಾಡಿದ ನಂತರ 20 ಸಾವಿರ ರೂ. ನೀಡಲಾಗುತ್ತದೆ. ಅದನ್ನು ತಿರುವಳಿ ಮಾಡಿದರೆ 50 ಸಾವಿರ ರೂ. ಸಾಲ ಸೌಲಭ್ಯ ದೊರೆಯುತ್ತದೆ. ಇದನ್ನು ಬಳಸಿಕೊಂಡು ಬೀದಿ ಬದಿ ವ್ಯಾಪಾರಿಗಳು ತಮ್ಮ ವ್ಯಾಪಾರವನ್ನು ವೃದ್ಧಿಸಿಕೊಳ್ಳಬೇಕು ಎಂದು ತಿಳಿಸಿದರು.

ಕನಿಷ್ಟ 90 ದಿನ ಕೆಲಸ ಮಾಡಿದ್ದರೆ ಕಾರ್ಮಿಕ ಇಲಾಖೆಯಿಂದ ಕಾರ್ಡ್ ನೀಡಲಾಗುತ್ತದೆ. ಕಾರ್ಮಿಕರಿಗೆ ವಿವಿಧ ರೀತಿಯ ಸೌಲಭ್ಯಗಳು ದೊರೆಯಲಿದೆ. ಅದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರದ ಮೂಲಕ ಜನರಿಗೆ ಅರಿವು ಮೂಡಿಸುವ ಕೆಲಸ ಆಗಬೇಕು ಎಂದರು.

ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವವರಿಗೆ ಯಶಸ್ವಿನಿ ಯೋಜನೆಯಡಿ ಆರೋಗ್ಯ ಸೌಲಭ್ಯಗಳು ದೊರೆಯುತ್ತದೆ. ಅದರ ಬಗ್ಗೆ ಜನರಿಗೆ ಅರಿವು ಮೂಡಿಸಲು ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಮಾತನಾಡಿ, ಉರ್ದು ಶಾಲೆಗಳಲ್ಲಿರುವ ಶಿಕ್ಷಕರ ಕೌಶಲ ಅಭಿವೃದ್ಧಿಗಾಗಿ ಡಯಟ್‌ನಲ್ಲಿ ತರಬೇತಿ ನೀಡಲು ಕ್ರಮವಹಿಸುವಂತೆ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೆ ತಿಳಿಸಿದರು.

ಆಯೋಗದ ಕಾರ್ಯದರ್ಶಿ ಮಾಜುದ್ದೀನ್ ಖಾನ್ ಮಾತನಾಡಿ, ಅಲ್ಪಸಂಖ್ಯಾತರ ಹಕ್ಕುಗಳ ಸಂರಕ್ಷಣೆ ಮಾಡುವುದು ಆಯೋಗದ ಮುಖ್ಯ ಉದ್ದೇಶ. ಭಾರತ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪಟ್ಟಿಯಲ್ಲಿದೆ. ಇದನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಪರಿವರ್ತನೆ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಸರ್ಕಾರಿ ನೌಕರರು ಜನರ ಬಳಿ ಹೋಗಿ ಸರ್ಕಾರಿ ಸೌಲಭ್ಯಗಳನ್ನು ಒದಗಿಸಲು ಮುತುವರ್ಜಿ ವಹಿಸಿಬೇಕಿದೆ ಎಂದು ತಿಳಿಸಿದರು.

ಆಯೋಗದ ಸದಸ್ಯರಾದ ಅಬ್ದುಲ್ ಖಾದೀರ್, ಆಪ್ತ ಕಾರ್ಯದರ್ಶಿ ಮುಜಿಬುಲ್ಲಾ ಜಫಾರಿ, ಜಿಲ್ಲಾ ಮಟ್ಟದ ಸಮಿತಿಯ ನೂತನ ಸದಸ್ಯರಾದ ಮೊಹಮ್ಮದ್ ಜಾಫರ್, ರೇಮಂಡ್, ಎನ್. ನಾಗಸೇನ್, ಯಶೋದ, ಜಮೀಲ್ ಅಹಮದ್ ಷರೀಫ್, ಮೊಹಮ್ಮದ್ ಗೌಸ್ ಹಾಗೂ ಇತರರಿದ್ದರು.

# ಟಾರ್ಗೆಟ್ ಪಿಯು ಕಾಲೇಜಿಗೆ ಸಚಿವ ಮಹದೇವಪ್ಪ ಭೇಟಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ : ನಗರದ ವಿಜಯ ನಗರದಲ್ಲಿರುವ ಟಾರ್ಗೆಟ್ ಪಿ.ಯು ಕಾಲೇಜಿಗೆ ಡಾ. ಎಚ್ ಸಿ. ಮಹದೇವಪ್ಪ ರವರು ಹಾಗೂ ಮೈಸೂರು ಊರಿಲಿಂಗಪೆದ್ದಿ ಮಠದ ಮಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಜ್ಞಾನಪ್ರಕಾಶ ಮಹಾಸ್ವಾಮೀಜಿ ರವರು ಸಂಸ್ಥೆಗೆ ಭೇಟಿ ನೀಡಿ ಮಕ್ಕಳೊಂದಿಗೆ ಸಂವಾದವನ್ನು ನಡೆಸುವುದರ ಜೊತೆಗೆ ಮಕ್ಕಳಿಗೆ ಮುಂದಿನ ಶೈಕ್ಷಣಿಕ ವರ್ಷಕ್ಕೆ ಉತ್ತಮ ಫಲಿತಾಂಶ ತರಲೆಂದು ಶುಭಕೋರಿ ಆಶೀರ್ವದಿಸಿದರು.

ಈ ಶುಭ ಸಮಾರಂಭದಲ್ಲಿ ಕಾಲೇಜಿನ ಸಂಸ್ಥಾಪಕರಾದ ಡಾ. ಎಂ.ಪಿ ಕುಮಾರಸ್ವಾಮಿಯವರು ಹಾಗೂ ಸಂಸ್ಥೆಯ ವ್ಯವಸ್ಥಾಪಕರಾದ ಹೆಚ್.ಕೆ ರಾಹುಲ್, ಗೋಪಾಲ್ ಬಿ, ಸುನಿಲ್ ಟಿ ಎ.ಹಾಗೂ ಪ್ರಾಂಶುಪಾಲರಾದ ಡಾ. ಎನ್ ಸತ್ಯನ್. ಹಾಗೂ ಕಾಲೇಜಿನ ಉಪನ್ಯಾಸಕ ವೃಂದ ಭಾಗಿಯಾಗಿತ್ತು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248